ಛೇರ್ಮನ್: ಆ ಕಡತವನ್ನು ಸ್ಪೀಕರ್‌ಗೆ ಕಳುಹಿಸಿಕೊಡುತ್ತಾರೆ ನಂತರ ಅದನ್ನು ವಿಚಾರ ಮಾಡೋಣ.

(ಋ) ಬಿ.ಹೆಚ್.ಎಸ್.ಮ್ಯಾನೇಜ್‌ಮೆಂಟ್‌ನವರ ಅಧೀನದಲ್ಲಿರುವ ವಿಜಯಾ ಕಾಲೇಜು ಮತ್ತು ವಿದ್ಯಾವರ್ಧಕ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ದಲಿತ ವರ್ಗದ ಶಿಕ್ಷಕರುಗಳಿಗೆ ತೊಂದರೆಯಾಗಿರುವುದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಛೇರ್ಮನ್‌ರವರೆ, ಈ ಒಂದು ವಿದ್ಯಾಸಂಸ್ಥೆಯವರು ಉಪಾಧ್ಯಾಯರುಗಳಿಗೆ ಸುಮಾರು 4-5 ವರ್ಷಗಳಿಂದ ಕೊಟ್ಟಿರತಕ್ಕಂಥ ಕಿರುಕುಳ, ಹಿಂಸೆ ಅಷ್ಟಿಷ್ಟಲ್ಲ, ಇಲ್ಲಿ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಇಲ್ಲ, ಮಾನ್ಯ ಗೋವಿಂದೇಗೌಡರಿಗೂ ಕೂಡ ಸಾಕಷ್ಟು ಸಲ ಈ ವಿಚಾರವನ್ನು ಅವರ ಗಮನಕ್ಕೆ ತಂದಿದ್ದೇವೆ; ಇಲ್ಲಿ ಹೆಚ್.ನಾಗರಾಜ್, ಶ್ರೀಮತಿ ವಿ.ಜಿ.ಜಯಲಕ್ಷ್ಮಿ, ಎನ್.ಮೂರ್ತಿ, ಡಾ:ನಾಗರಾಜ್, ಇವೆರಲ್ಲರೂ ಕೂಡ ದಲಿತ ವರ್ಗಕ್ಕೆ ಸೇರಿರತಕ್ಕಂಥ ಶಿಕ್ಷಕರು. ಇವರೆಲ್ಲರೂ ವಿದ್ಯಾವರ್ಧಕ ಬಿ.ಹೆಚ್.ಎಸ್. ಮ್ಯಾನೇಜ್‌ಮೆಂಟ್‌ರವರ ಅಧೀನದಲ್ಲಿರುವ ವಿಜಯಾ ಕಾಲೇಜು ಮತ್ತು ವಿದ್ಯಾವರ್ಧಕ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರು ಸರ್ಕಾರ ಮತ್ತು ಕೋರ್ಟ್ ನಿರ್ದೇಶನಗಳನ್ನೂ ಕೂಡ ಉಲ್ಲಂಘನೆ ಮಾಡಿ ಈ ಶಿಕ್ಷಕರಿಗೆ ಕೊಡಬೇಕಾದ ಕಾನೂನುಬದ್ಧವಾಗಿ ಬರಬೇಕಾಗಿದ್ದ ಸೌಲಭ್ಯಗಳನ್ನು ಕೊಡುವುದಕ್ಕೆ ನಿರಂತರವಾಗಿ ನಿರಾಕರಿಸುತ್ತಿದ್ದಾರೆ. ಇದು ಸುಮಾರು 5-6 ವರ್ಷಗಳಿಂದ ನಡೆಯುತ್ತಿದೆ. ನಾಗರಾಜ್ ಎಂಬುವವನು ಒಬ್ಬ ದಲಿತ ಶಿಕ್ಷಕ ಈತನು ಸುಮಾರು 4-5 ವರ್ಷಗಳಿಂದ ಆ ಒಂದು ವಿದ್ಯಾವರ್ಧಕ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು ಆತನು ಈಗ ಪ್ರಿನ್ಸಿಪಾಲ್ ಆಗಬೇಕಾಗಿತ್ತು, ಆದರೆ ಆತ ಪ್ರಿನ್ಸಿಪಾಲ್ ಆಗಬಾರದು ಎನ್ನುವ ಒಂದೇ ಒಂದು ಕಾರಣಕ್ಕಾಗಿ ಆತನು ಪ್ರಿನ್ಸಿಪಾಲ್ ಹುದ್ದೆಗೆ ತರಬಾರದು, ಬರುವುದಕ್ಕೆ ಅವಕಾಶ ಮಾಡಿಕೊಡಬಾರದು ಎನ್ನುವ ಕಾರಣಕೋಸ್ಕರ ಯಾವುದೇ ಒಂದು ಕುಂಟ ನೆಪ ಒಡ್ಡಿ ಆ ಶಿಕ್ಷಣ ಸಂಸ್ಥೆಯವರು ಸದರಿಯವರನ್ನು ಕೆಲಸದಿಂದ ತೆಗೆದು ಸುಮಾರು 4-5 ವರ್ಷಗಳಿಂದ ಸಂಬಳವಿಲ್ಲದೆ ಆತ ಬೀದಿಪಾಲಾಗಿದ್ದಾನೆ. ಇದರ ಬಗ್ಗೆ ಸರ್ಕಾರ ಕೂಡ ಸ್ಪಷ್ಟವಾದ ಆದೇಶವನ್ನು ಕೂಡ ಕೊಟ್ಟಿದೆ. ಮಾನ್ಯ ಗೋವಿಂದೇಗೌಡರೂ ಕೂಡ ಆ ಸಂಸ್ಥೆಗೆ ಸ್ವತಃ ಅವರೇ ಪತ್ರ ಬರೆದು ಸದರಿಯವರನ್ನು ಸರ್ಕಾರದ ನಿಯಮದನ್ವಯ ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದು ಅವರೇ ಸ್ಪಷ್ಟವಾಗಿ ಬರೆದು ಕಳಿಸಿದ್ದಾರೆ. ಆ ಮ್ಯಾನೇಜ್‌ಮೆಂಟ್‌ನವರು ಹೈಕೋರ್ಟ್‌ಗೆ ಹೋದರು, ಅಲ್ಲಿ ಆರಿಟ್‌ಪಿಟಿಷನ್‌ನ್ನು ಹೈಕೋರ್ಟ್ ಡಿಸ್‌ಮಿಸ್ ಮಾಡಿತು. ಗ್ರಾಂಟ್ ಇನ್-ಏಯ್ಡ್ ಕೋಡ್ ಪ್ರಕಾರ ಸರ್ಕಾರದ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಅದನ್ನು ಉಲ್ಲಂಘನೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದೆ. ನಂತರ ಸರ್ಕಾರದವರಿಂದ ಆ ಒಂದು ವಿದ್ಯಾ ಸಂಸ್ಥೆಗೆ ಪತ್ರ ಕೂಡ ಹೋಗಿದೆ ಆ ನಾಗರಾಜ್ ಎಂಬುವವರನ್ನು ಕೆಲಸಕ್ಕೆ ತಕ್ಷಣ

ತೆಗೆದುಕೊಳ್ಳಬೇಕೆಂದು ಇದೆ. ಆದರೆ ಇದುವರೆಏಗೂ ಅವರು ಆತನನ್ನು ಕೆಲಸಕ್ಕೆ ತೆಗೆದುಕೊಳ್ಳಲಿಲ್ಲ. ಸರ್ಕಾರದ ಆಜ್ಞೆಯನ್ನು ಕೋರ್ಟನ ಆಜ್ಞೆಯನ್ನು, ಮತ್ತು ಈ ಶಿಕ್ಷಣ ಇಲಾಖೆಯ ಅಂದರೆ ಪಿ.ಯು. ಬೋರ್ಡಿನ ಡೈರೆಕ್ಟರ್ ಹಾಗೂ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸುಮಾರು 5-6 ವರ್ಷಗಳಿಂದ ಸರ್ಕಾರದ ಮತ್ತು ಕೋರ್ಟಿನ ಆಜ್ಞೆಯನ್ನು ಜಾರಿ ಮಾಡದೆ ಹಾಗೆ ಸತತವಾಗಿ ನಿರಾಕರಿಸುತ್ತಿದ್ದಾರೆ. ಇಲ್ಲಿ ಕುತಂತ್ರ ನಡೆಯುತ್ತಿದೆ. ಏಕೆಂದರೆ ಆತ ಒಬ್ಬದಲಿತ ಶಿಕ್ಷಕ ಎನ್ನುವ ಕಾರಣಕೋಸ್ಕರ ಹಾಗೂ ಆ ವಿದ್ಯಾ ಸಂಸ್ಥೆಯಲ್ಲಿ ಪ್ರಿನ್ಸಿಪಾಲ್ ಆಗಬಾರದು ಎಂದು ಕುತಂತ್ರ ನಡೆಯುತ್ತಿದೆ. ಅದೇರೀತಿಯಲ್ಲಿ ಶ್ರೀಮತಿ ವಿಜಯಲಕ್ಷ್ಮಿರವರಿಗೂ ಕೂಡ ಪ್ರಿನ್ಸಿಪಾಲ್ ಆಗಬಾರದು ಎನ್ನುವ ಕಾರಣಕೋಸ್ಕರ ಸರ್ಕಾರ ಮತ್ತು ಇದರ ಆದೇಶವನ್ನು ನಿರಾಕರಿಸುತ್ತಿದ್ದಾರೆ. ಅದೇ ರೀತಿಯಲ್ಲಿ ವಿಜಯಾ ಕಾಲೇಜಿನಲ್ಲಿ ಇರತಕ್ಕಂಥ ಡಾ: ಜಯಪ್ಪ ಪಿ.ಹೆಚ್.ಡಿ., ಇವರಿಗೂ ಕೂಡ ಮಾಡಿದ್ದಾರೆ. ಇದರ ಬಗ್ಗೆ ಸಾಕಷ್ಟು ಸಲ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ತಂದಿದ್ದೇವೆ. ಹಾಗೂ ಸರ್ಕಾರದ ಗಮನಕ್ಕೆ ಕೂಡ ತಂದಿದ್ದೇವೆ. ಇಷ್ಟೆಲ್ಲಾ ಆದರೂ ಕೂಡ ಆ ನಾಲ್ಕು ಜನ ಶಿಕ್ಷಕರನ್ನು ಆ ಮ್ಯಾನೇಜ್‌ಮೆಂಟ್‌ನವರು ನಡೆಸಿಕೊಳ್ಳುತ್ತಿರುವ ವಿಧಾನ ಹೇಗಿದೆ ಅಂದರೆ ಏನಾದರೂ ಮಾಡಿ ಆ ನಾಲ್ಕು ಜನರನ್ನು ಆ ಶಿಕ್ಷಣ ಸಂಸ್ಥೆಯಿಂದ ಹೊರಗೆ ಹಾಕಬೇಕೆಂದು ಹಾಗೂ ಅವರು ಅಲ್ಲಿ ಕೆಲಸ ಮಾಡಬಾರದು ಎನ್ನುವ ಒಂದೇ ಒಂದು ಉದ್ದೇಶದಿಂದ ಸರ್ಕಾರದ ಮತ್ತು ಕೋರ್ಟಿನ ಆದೇಶವನ್ನು ಉಲ್ಲಂಘನೆ ಮಾಡುತ್ತಿದ್ದಾರೆ. ಈ ರೀತಿ ಉಲ್ಲಂಘನೆ ಮಾಡತಕ್ಕಂಥವರು ಯಾರೆಂದರೆ ಸರ್ಕಾರದ ಅಧೀನದಲ್ಲಿರತಕ್ಕ ಪಿ.ಯು.ಸಿ ಬೋರ್ಡಿನ ಅಧಿಕಾರಿಗಳು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಸರ್ಕಾರದ ಆದೇಶವನ್ನು ಕೂಡ ಜಾರಿಗೆ ಬಾರದ ರೀತಿಯಲ್ಲಿ ಸುಮಾರು 4-5 ವರ್ಷಗಳಿಂದ ಈ ರೀತಿಯಾದಂತಹ ವ್ಯವಸ್ಥಿತವಾದ ಪಿತೂರಿಯನ್ನು ಶಿಕ್ಷಣ ಇಲಾಖೆ ಮತ್ತು ಪಿ.ಯು.ಬೋರ್ಡಿನಲ್ಲಿ ಮಾಡುತ್ತಿದ್ದಾರೆ. ಮಾನ್ಯ ಗೋವಿಂದೇಗೌಡರು ಸ್ವತಃ ಅವರೇ ಈ ವಿಷಯವನ್ನು ಸಂಬಂಧಪಟ್ಟ ಸಂಸ್ಥೆಗೆ ತಕ್ಷಣ ಸರ್ಕಾರದ ನಿಯಮದನ್ವಯ ಸದರಿಯವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಬರೆದಿದ್ದಾರೆ. ಆದರೆ ಅದನ್ನು ಜಾರಿಗೆ ಮಾಡಲಿಲ್ಲ. ಯಾರನ್ನು ನಾನು ಇದರ ಬಗ್ಗೆ ಕೇಳಬೇಕು? ಸರ್ಕಾರ, ಕೋರ್ಟ್ ಹಾಗೂ ಮಂತ್ರಿಗಳು ಕೂಡ ನಿಯಮಾವಳಿ ಪ್ರಕಾರ ಬೇಕೆಂದು ಹೇಳುತ್ತಾರೆ. ಇದಲ್ಲದೇ ಕೋರ್ಟ್‌ಕೂಡ ಒಂದು ತೀರ್ಪನ್ನು ನೀಡಿದೆ. ಅದೇನೆಂದರೆ ನೀವು ಗ್ರಾಂಟ್ ಇನ್ ಏಡ್ ನಿಯಾಮಾವಳಿಗಳನ್ನು ಉಲ್ಲಂಘನೆ ಮಾಡಿದರೆ ನಿಮಗೆ ಕೊಡತಕ್ಕಂಥ ಎಲ್ಲಾ ಗ್ರಾಂಟ್ಸ್ ತಕ್ಷಣ ನಿಲ್ಲಿಸಿಬಿಡಿ ಎಂದು ಸರ್ಕಾರಕ್ಕೆ ಸ್ಪಷ್ಟವಾದ ಆದೇಶವನ್ನು ಕೂಡ ಮಾಡಿದೆ. ಅದರಂತೆ ಸರ್ಕಾರ ವಿದ್ಯಾ ಸಂಸ್ಥೆಗಳಿಗೆ ಗ್ರಾಂಟ್ಸ್‌ನ್ನು ನಿಲ್ಲಿಸಬೇಕು, ಸಂಬಳಗಳನ್ನು ನಿಲ್ಲಿಸಬೇಕು ಎಂದು ಕೋರ್ಟಿನ ಆದೇಶದನ್ವಯ ಬರೆದಿದ್ದಾರೆ. ಹೀಗಿದ್ದರೂ ಕೂಡ ಕೆಲವು ಕಾಲ ನಿಲ್ಲಿಸಿ ಪುನಃ ಪುನರಾವರ್ತನೆ ಮಾಡಿ ಕೊಡುತ್ತಿದ್ದಾರೆ. ಇದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದು ಕೇಳಿದರೆ ಮಾನ್ಯ ಸಿಂಧ್ಯಾರವರು ಉತ್ತರ ಕೊಡುತ್ತಾರೆ ಅದನ್ನು ನಾನು ಒಪ್ಪಲಿಕ್ಕೆ

ತಯಾರಿಲ್ಲ. ಏಕೆಂದರೆ ಇದು ಸುಮಾರು ವರ್ಷಗಳಿಂದ ನಡೆಯುತ್ತಿದೆ. ತಕ್ಷಣ ಯಾರು ಸರ್ಕಾರದ ಮತ್ತು ಕೋರ್ಟಿನ ಆದೇಶಗಳನ್ನು ಉಲ್ಲಂಘನೆ ಮಾಡಿರುವ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಆ ಪ್ರಕಾರ ಸದರಿಯವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಮಾನ್ಯ ಛೇರ್ಮನ್‌ರವರೇ, ಮಾನ್ಯ ಶ್ರೀರಾಮರೆಡ್ಡಿರವರು ಬಿಹೆಚ್ಎನ್ ಜೂನಿಯರ್ ಕಾಲೇಜಿನ ಮ್ಯಾನೇಜ್‌ಮೆಂಟ್‌ನವರು ಸರ್ಕಾರದ ಹಾಗೂ ಕೋರ್ಟಿನ ಆಜ್ಞೆಗಳನ್ನು ಪರಿಪಾಲನೆ ಮಾಡುತ್ತಾ ಇಲ್ಲವೆಂದು ಹಾಗೂ ಅನುಷ್ಠಾನಕ್ಕೆ ತಂದಿಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ. ಇದರಿಂದ ನಾಲ್ಕು ಜನ ದಲಿತ ವರ್ಗಕ್ಕೆ ಸೇರಿರತಕ್ಕಂಥ ಆ ಶಿಕ್ಷಕರುಗಳಿಗೆ ತೊಂದರೆಯಾಗಿದೆ. ಜೊತೆಗೆ ಅಲ್ಲಿ ಒಬ್ಬರು ಪ್ರಿನಿಸಪಾಲ್ ಆಗುವುದಕ್ಕೆ ಅಡಳಿತವರ್ಗದವರು ಇದನ್ನು ತಪ್ಪಿಸುವ ಸಲುವಾಗಿ ಸಂಚು ಮಾಡಿದ್ದಾರೆಂದು ಹೇಳಿದ್ದಾರೆ. ಇದೂ ಕೂಡ ನನ್ನ ಗಮನಕ್ಕೆ ಬಂದಿದೆ. ಶಿಕ್ಷಣ ಸಚಿವರು ಇಲ್ಲದೇ ಇರುವುದರಿಂದ ನಾನು ಸರ್ಕಾರದ ಪರವಾಗಿ ಏನು ಹೇಳುತ್ತೇನೆಂದರೆ ಕಾನೂನು ಬದ್ಧವಾದ ಕ್ರಮ ಹಾಗೂ ಕೋರ್ಟಿನ ಆಜ್ಞೆಯನ್ನು ಅನುಷ್ಠಾನಕ್ಕೆ ತರುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನನ್ನ ಪ್ರಶ್ನೆ ಏನೆಂದರೆ ಸರ್ಕಾರ ಈಗಾಗಲೇ ಕ್ರಮ ಕೈಗೊಂಡಿದೆ, ಆದರೂ ಕೂಡ ಅದು ಅನುಷ್ಠಾನಕ್ಕೆ ತರುವಲ್ಲಿ ಜಾರಿ ಮಾಡುತ್ತಿಲ್ಲ. ಸರ್ಕಾರ ಕ್ರಮ ತೆಗೆದುಕೊಂಡಿಲ್ಲ ಎಂದಲ್ಲ, ಸರ್ಕಾರದ ಪರವಾಗಿ ಮಂತ್ರಿಗಳು ಸ್ಪಷ್ಟವಾಗಿ ಬರೆದಿದ್ದಾರೆ. ಅದು ಎಲ್ಲವನ್ನೂ ಮಾಡಿದ್ದಾರೆ. ನೋಡಿ ನಾನು ಅದಕ್ಕೆ ಹೇಳಿದ್ದು ಸಿಂಧ್ಯಾರವರು ಯಾವಾಗಲೂ ಉತ್ತರವನ್ನು ಹಾರಿಸಿಬಿಡುತ್ತಾರೆ. ಸರ್ಕಾರ ಕ್ರಮ ಕೈಗೊಂಡಿದೆ, ಮಂತ್ರಿಗಳು ಬರೆದಿದ್ದಾರೆ, ಆದರೆ ಅಧಿಕಾರಿಗಳು ಅದನ್ನು ಜಾರಿ ಮಾಡುತ್ತಿಲ್ಲ. ನೋಡಿ ಬೇಕಾದರೆ ಮಾನ್ಯ ಗೋವಿಂದೇಗೌಡರು ಬರೆದಿರುವ ಪತ್ರ ನನ್ನ ಹತ್ತಿರ ಇದೆ..

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಶ್ರೀರಾಮರೆಡ್ಡಿಯವರೇ, ನಾನು ಎಲ್ಲೂ ಹಾರಿಕೆ ಉತ್ತರ ಕೊಡುವುದಿಲ್ಲ. ದಯಮಾಡಿ ತಾವು ಬೇಜಾವಾಬ್ದಾರಿಯಾಗಿರತಕ್ಕಂಥ ವಿಚಾರಗಳನ್ನು ಹೇಳಬೇಡಿ. ನಾನು ಹಾರಿಕೆ ಉತ್ತರಗಳನ್ನು ಕೊಟ್ಟಿಲ್ಲ. ನಾನು ಏನು ಹೇಳಿದ್ದೇನೆಂದರೆ ಕೋರ್ಟಿನ ಆಜ್ಞೆ ಹಾಗೂ ಸರ್ಕಾರದ ಆಜ್ಞೆ ಏನಿದೆ ಇವೆರಡನ್ನೂ ಅನುಷ್ಠಾನಕ್ಕೆ ತರುತ್ತೇವೆ ಮತ್ತು ಅನುಷ್ಠಾನಕ್ಕೆ ತರುವಲ್ಲಿ ಅಡಳಿತ ಮಂಡಳಿಯ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದೇನೆ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಈಗಾಗಲೇ ಸರ್ಕಾರ ಕ್ರಮ ಕೈಗೊಂಡಿದೆ. ಆದರೆ ಸರ್ಕಾರದ ಕ್ರಮವನ್ನು ಅಧಿಕಾರಿಗಳು ಜಾರಿಗೆ ಮಾಡುತ್ತಾ ಇಲ್ಲ. ಸರ್ಕಾರ ಕ್ರಮ ತೆಗೆದುಕೊಂಡಿದೆ, ಮಂತ್ರಿಗಳು ಬರೆದಿದ್ದಾರೆ, ನೋಡಿ ಬೇಕಾದರೆ ಕೋರ್ಟಿನ ಆಜ್ಞೆ, ಸರ್ಕಾರದ ಆಜ್ಞೆ, ಹಾಗೂ ಮಾನ್ಯ ಗೋವಿಂದೇಗೌಡರು ಬರೆದಿರುವ ಪತ್ರ ಕೂಡ ಎಲ್ಲವೂ ಇಲ್ಲಿ ಇದೆ. ಇದರ ಮೇಲೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ ಎನ್ನುವುದು ನನ್ನ ಪ್ರಶ್ನೆ ಅಲ್ಲ. ಸರ್ಕಾರದ ಕ್ರಮವನ್ನು ನಿಮ್ಮ ಅಧಿಕಾರಿಗಳು ಜಾರಿ ಮಾಡುತ್ತಿಲ್ಲ. ನಿಮ್ಮ ಅಧಿಕಾರಿಗಳು ಸರ್ಕಾರದ ಕ್ರಮವನ್ನು ಜಾರಿಗೆ ಮಾಡುತ್ತಿಲ್ಲ ಎಂದರೆ ಅವರನ್ನು ನೀವು ಏಕೆ ಇಟ್ಟುಕೊಂಡಿದ್ದೀರಿ?

ಛೇರ್ಮನ್: ಈಗ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆಂದು ಅವರು ಹೇಳಿದ್ದಾರೆ. ಈ ಕ್ರಮವನ್ನು ಬಿಟ್ಟು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಅವರಿಗೆ ತಾವು ಅವಕಾಶ ಮಾಡಿಕೊಡಿ.

ಶ್ರೀ ಎನ್.ರಾಜೇಂದ್ರನ್ (ಕೆ.ಜಿ.ಎಫ್): ಛೇರ್ಮನ್‌ರವರೇ, ನನ್ನದು ಒಂದು ಪಾಯಿಂಟ್ ಆಫ್ ಆರ್ಡರ್ ಇದೆ

ಛೇರ್ಮನ್: ಜೀರೋ ಅವರ್‌ನಲ್ಲಿ ಪಾಯಿಂಟ್ ಆಫ್ ಆರ್ಡರ್ ಇಲ್ಲ.

1.20 ಪಿ.ಎಂ

(ಎ) ಕುಂದಾಪುರ ಹಾಗೂ ಉಡುಪಿ ತಾಲ್ಲೂಕುಗಳಲ್ಲಿ ಸಮುದ್ರ ಕೊರೆತದಿಂದ ಉಂಟಾಗಿರುವ ಹಾನಿ

+ ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ): ಮಾನ್ಯ ಛೇರ್ಮನ್‌ರವರೆ, ಕುಂದಾಪುರ ಹಾಗೂ ಉಡುಪಿ ತಾಲ್ಲೂಕುಗಳಲ್ಲಿ ಸಮುದ್ರದ ಕೊರತೆಯಿಂದ ಜಾಸ್ತಿ ಹಾನಿಯಾಗುತ್ತಿದೆ. ಈ ಬಗ್ಗೆ ತಾತ್ಕಾಲಿಕ ತಡೆಗಳನ್ನು ಹಾಕುತ್ತಿದ್ದರೂ ಕೂಡ ಅದು ಯಾವುದೂ ಪ್ರಯೋಜನವಾಗುತ್ತಿಲ್ಲ. ಕುಂದಾಪುರದ ರಾಷ್ಟ್ರೀಯ ಹೆದ್ದಾರಿಗೆ ಸಮಾನಾಂತರವಾಗಿ ಹಾದು ಹೋಗಿರುವ ಕರಾವಳಿ ರಸ್ತೆ ಸಮುದ್ರದಿಂದ ಕೊಚ್ಚಿ ಹೋಗತಕ್ಕಂಥ ಒಂದು ಭೀತಿ ಇದೆ. ಹಾಗೂ ಈ ಎರಡು ಸ್ಥಳಗಳಲ್ಲಿ ಸಹ ಎರಡು ಅಲ್ಪಸಂಖ್ಯಾತರ ಮನೆಗಳೂ ಸಹ ಕೊಚ್ಚಿಕೊಂಡು ಹೋಗುವಂತಹ ಪರಿಸ್ಥಿತಿ ಇದೆ. ಇದಕ್ಕೆ ಮುಖ್ಯವಾದ ಸಮಸ್ಯೆ ಏನೆಂದರೆ ತಮ್ಮಲ್ಲಿ ತಾಂತ್ರಿಕ ತರಬೇತಿ ಹೊಂದಿದವರು ಯಾರೂ ಇಲ್ಲ. ಕಲ್ಲು ಹಾಕುತ್ತಾರೆ, ಕೆಲ್ಲು ಸಮುದ್ರದಲ್ಲಿ ಕೊಚ್ಚಿಹೋಗುತ್ತದೆ. ದೊಡ್ಡ ಕಲ್ಲು ಹಾಕಿದರೆ ಅದನ್ನು ಹಾಕುವುದು ಸರಿಯಲ್ಲ ಎನ್ನುತ್ತೀರಿ. ತುರ್ತು ಅವುಗಳನ್ನು ತಡೆ ಒಡ್ಡಬೇಕಾದರೆ ಏನಾದರೂ ಕ್ರಮವನ್ನು ಹಾಕಿಕೊಳ್ಳಬೇಕು, ನಿರಂತರವಾಗಿ ಈ